# ಕರ್ನಾಟಕ ವಿಧಾನ ಪರಿಷತ್ತು

## ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಚಿದಾನಂದ್ .ಎಂ. ಗೌಡ ಇವರು ದಿನಾಂಕ 07/12/2023ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ಪ್ರಸ್ತಾವನೆಗೆ ಉತ್ತರ

**ಪ್ರಸ್ತಾವನೆ:**

ರಾಜ್ಯದ ಸಮಸ್ತ ಪತ್ರಕರ್ತರಿಗೆ ರಕ್ಷಣಾ ಕಾಯ್ದೆಯನ್ನು ಜಾರಿಗೊಳಿಸಬೇಕು ಹಾಗೂ ಪ್ರತಿಯೊಬ್ಬ ವರದಿಗಾರರಿಗೂ ಜೀವ ವಿಮಾ ಸೌಲಭ್ಯವನ್ನು ಸರ್ಕಾರ ಒದಗಿಸಬೇಕು. ಪತ್ರಕರ್ತರು ಹಾಗೂ ಮಾಧ್ಯಮ ಪ್ರತಿನಿಧಿಗಳು ರಾಜ್ಯಾದ್ಯಂತ ಸಂಚರಿಸಲು ಉಚಿತ ಬಸ್ ನೀಡಬೇಕು. ವಾರ್ತಾ ಇಲಾಖೆಯಲ್ಲಿ ಖಾಲಿಯಿರುವ ಸುಮಾರು 300 ಅಧಿಕ ಸಿಬ್ಬಂದಿಗಳನ್ನು ಕೂಡಲೇ ನೇಮಿಸಿಕೊಳ್ಳಬೇಕು. ಪತ್ರಕರ್ತರ ಜ್ವಲಂತ ಸಮಸ್ಯೆಗಳ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಮೂಲಕ ಪತ್ರಕರ್ತರು ಹಾಗೂ ದೃಶ್ಯ ಮಾಧ್ಯಮ ಪ್ರತಿನಿಧಿಗಳಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಸರ್ಕಾರವನ್ನು ಆಗ್ರಹಿಸುತ್ತೇನೆ.

**ಉತ್ತರ :**

ದೇಶದ ಕೆಲವು ರಾಜ್ಯಗಳಲ್ಲಿ ಪತ್ರಕರ್ತರ ಮೇಲೆ ಹಲ್ಲೆ ನಡೆದ ಪ್ರಕರಣಗಳು ಗಮನಕ್ಕೆ ಬಂದ ಹಿನ್ನೆಲೆಯಲ್ಲಿ ಭಾರತೀಯ ಪತ್ರಿಕಾ ಮಂಡಳಿಯ ಆಶಯದಂತೆ ಸರ್ಕಾರದ ಆದೇಶ ಸಂಖ್ಯೆ : ಐಟಿವೈ : 9 : ವಾಪ್ರಪ್ರ : 1998, ದಿನಾಂಕ : 06-03-1998ರಡಿ ಪತ್ರಕರ್ತರ ಮೇಲೆ ಹಲ್ಲೆ ನಡೆದ ಸಂದರ್ಭಗಳಲ್ಲಿ ತನಿಖೆ ನಡೆಸಿ ವರದಿ ಸಲ್ಲಿಸಲು ರಾಜ್ಯದಲ್ಲೂ ಜಿಲ್ಲಾವಾರು ಸಮಿತಿಗಳನ್ನು ರಚಿಸಲಾಗಿದೆ.

ಕೋವಿಡ್-19ರ ಸಮಯದಲ್ಲಿ ಕರ್ತವ್ಯನಿರತ ಹಾಗೂ ಕರ್ತವ್ಯದಿಂದ ದೂರ ಉಳಿದಿದ್ದ 40ಕ್ಕೂ ಹೆಚ್ಚು ಪತ್ರಕರ್ತರು ಮೃತರಾದ ಸಂದರ್ಭದಲ್ಲಿ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಮೃತರ ಕುಟುಂಬಗಳಿಗೆ ತಲಾ ಐದು ಲಕ್ಷ ರೂ.ಗಳ ಆರ್ಥಿಕ ನೆರವು ಒದಗಿಸಲಾಗಿದೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವತಿಯಿಂದ ಕರ್ನಾಟಕ ಪತ್ರಕರ್ತರ ಸಹಕಾರ ಸಂಘದ ಸದಸ್ಯರ ಅಪಘಾತ ವಿಮಾ ರಕ್ಷಣಾ ಯೋಜನೆಗೆ ಪ್ರತಿ ವರ್ಷ ರೂ.74000/- ಗಳನ್ನು ಅನುದಾನವಾಗಿ ನೀಡಲಾಗುತ್ತಿದೆ.

ಎಲ್ಲಾ ಪತ್ರಿಕೆಗಳಲ್ಲಿ ಹಾಗೂ ಎಲ್ಲಾ ಸುದ್ದಿ ವಾಹಿನಿಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಾಧ್ಯಮ ವರ್ಗದವರಿಗೆ ಜೀವ ವಿಮಾ ಸೌಲಭ್ಯವನ್ನು ಸಂಬಂಧಿತ ಆಡಳಿತ ಮಂಡಳಿ ಅಥವಾ ಮಾಲೀಕರೇ ನೀಡಬೇಕಾಗಿರುತ್ತದೆ.

ಇಲಾಖೆಯಿಂದ ಮಾನ್ಯತಾ ಪತ್ರಗಳನ್ನು ಹೊಂದಿರುವ ಪತ್ರಕರ್ತರು ರಾಜ್ಯದಾದ್ಯಂತ ಪ್ರಯಾಣಿಸಲು ಅನುಕೂಲವಾಗುವಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆಯ ವಿವಿಧ ನಿಗಮಗಳ ಎಲ್ಲಾ ಶ್ರೇಣಿಗಳ ಬಸ್‌ಗಳಲ್ಲಿ ಉಚಿತವಾಗಿ ಸಂಚರಿಸಲು ಅನುಕೂಲವಾಗುವಂತೆ ಸ್ಮಾರ್ಟ್ ಕಾರ್ಡ್‌ಗಳನ್ನು ವಿತರಿಸಲಾಗುತ್ತಿದೆ. ಈ ಸೌಲಭ್ಯವನ್ನು ಪ್ರಸ್ತುತ 2100 ಜನ ಪತ್ರಕರ್ತರು ಪಡೆಯುತ್ತಿದ್ದಾರೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಮಂಜೂರಾದ ಒಟ್ಟು ಹುದ್ದೆಗಳು 565. ಹಾಲಿ 257 ಅಧಿಕಾರಿ/ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದು, ಉಳಿದ 308 ಹುದ್ದೆಗಳು ಖಾಲಿಯಿರುತ್ತವೆ. ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳು 1978ರಲ್ಲಿ ರೂಪಿಸಲ್ಪಟ್ಟಿದ್ದು, ಆಧುನಿಕ ವಿದ್ಯಾರ್ಹತೆ, ವಿದ್ಯುನ್ಮಾನ ಮಾಧ್ಯಮಗಳಲ್ಲಿ ಸೇವಾನುಭವ ಹಾಗೂ ಅರ್ಹತಾದಾಯಕ ಸೇವೆಯನ್ನು ಪರಿಷ್ಕರಿಸಿ ಹೊಸದಾಗಿ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ಪರಿಷ್ಕರಣೆ ಕಾರ್ಯವು ಚಾಲ್ತಿಯಲ್ಲಿದ್ದು, ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಗಳು

ಅನುಷ್ಠಾನಗೊಂಡ ತರುವಾಯ  ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಅಗತ್ಯ ಕ್ರಮ ವಹಿಸಲಾಗುವುದು.

ಸಂಕಷ್ಟದಲ್ಲಿರುವ ನಿವೃತ್ತ ಪತ್ರಕರ್ತರಿಗೆ ರೂ.12,000/- ಗಳ ಮಾಸಾಶನವನ್ನು ಹಾಗೂ ಅಂತಹ ಪತ್ರಕರ್ತರು ಮೃತರಾದಲ್ಲಿ ಅವರ ಅವಲಂಬಿತ ಪತ್ನಿ ಅಥವಾ ಪತಿಗೆ ರೂ.6000/-ಗಳ ಕುಟುಂಬ ಮಾಸಾಶನವನ್ನು ರಾಜ್ಯ ಸರ್ಕಾರವು ನೀಡುತ್ತಿದೆ. ಪ್ರಸ್ತುತ 188 ಸಂಕಷ್ಟದಲ್ಲಿರುವ ನಿವೃತ್ತ ಪತ್ರಕರ್ತರು ಹಾಗೂ 52 ಮಂದಿ ಕುಟುಂಬ ಮಾಸಾಶನ ಪಡೆಯುತ್ತಿದ್ದಾರೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ಪತ್ರಕರ್ತರು ಮತ್ತು ಅವಲಂಬಿತರಿಗಾಗಿ ವಾರ್ಷಿಕವಾಗಿ ರೂ.5.00 ಲಕ್ಷಗಳ ಮೊತ್ತದವರೆಗಿನ ನಗದು ರಹಿತ ಉಚಿತ ವೈದ್ಯಕೀಯ ಸೇವೆ ಒದಗಿಸುವ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯನ್ನು ಅನುಷ್ಠಾನಗೊಳಿಸಿ, ರಾಜ್ಯಾದ್ಯಂತ 1300 ಪತ್ರಕರ್ತರಿಗೆ ಕಾರ್ಡುಗಳನ್ನು ವಿತರಿಸಲಾಗಿತ್ತು.  ಪ್ರಸ್ತುತ ಈ ಯೋಜನೆಯಡಿಯ ಪತ್ರಕರ್ತರನ್ನು ಪ್ರಧಾನಮಂತ್ರಿ ಜನಾರೋಗ್ಯ ಯೋಜನೆಯ ವ್ಯಾಪ್ತಿಗೆ ಒಳಪಡಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದ್ದು,  ಈ ಸಂಬಂಧ ಮಾಧ್ಯಮ ಮಾನ್ಯತೆ ಪಡೆದ ಪತ್ರಕರ್ತರು ಹಾಗೂ ಅವರ ಅವಲಂಬಿತ ಕುಟುಂಬದವರ ದತ್ತಾಂಶವನ್ನು ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯದ ಸೇವಾ ಸಿಂಧು ವೇದಿಕೆಯನ್ನು ಬಳಕೆಮಾಡಿಕೊಳ್ಳಲು ಕ್ರಮವಹಿಸಲಾಗುತ್ತಿದೆ ಮತ್ತು ಇವರುಗಳ ನೋಂದಣಿಗೆ ಅವಶ್ಯವಿರುವ ಎ.ಪಿ.ಎಲ್ ಕಾರ್ಡುಗಳ ವಿತರಣೆಗೆ ಆಂದೋಲನ ಹಮ್ಮಿಕೊಂಡು ಪತ್ರಕರ್ತರಿಗೆ ತುರ್ತಾಗಿ ಸದರಿ ಕಾರ್ಡುಗಳನ್ನು ವಿತರಣೆ ಮಾಡಿಕೊಡುವಂತೆ ಆಯುಕ್ತರು, ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಇಲಾಖೆಗೆ ಪತ್ರ ಬರೆಯಲಾಗಿದೆ.

ಕನ್ನಡ ಪತ್ರಿಕೋದ್ಯಮಕ್ಕೆ ಪ್ರೋತ್ಸಾಹ ನೀಡುವ ಸಲುವಾಗಿ ಪ್ರಾದೇಶಿಕ ಮತ್ತು ಜಿಲ್ಲಾ ಮಟ್ಟದ ಪತ್ರಿಕೆಗಳಿಗೆ ಪ್ರತಿ ತಿಂಗಳು 02 ಪುಟಗಳ ಜಾಹೀರಾತನ್ನು ನೀಡಲಾಗುತ್ತಿದೆ.  ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಾಧ್ಯಮ ಮಾನ್ಯತೆ ಹೊಂದಿದ 124 ಪತ್ರಕರ್ತರಿಗೆ 2017-18ನೇ ಸಾಲಿನಲ್ಲಿ ರೂ.1,88,24,440/-ಗಳ ವೆಚ್ಚದಲ್ಲಿ ಹಾಗೂ 120 ಸಂಪಾದಕರಿಗೆ ರೂ.1,82,17,200/-ಗಳ ವೆಚ್ಚದಲ್ಲಿ ಡೆಸ್ಕ್ ಟಾಪ್, ಪ್ರಿಂಟರ್ ಹಾಗೂ ಕ್ಯಾಮೆರ ಒಳಗೊಂಡ ಮೀಡಿಯಾ ಕಿಟ್‌ಗಳನ್ನು ವಿತರಿಸಲಾಗಿದೆ. 2021-22ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳಿಗೆ ಸೇರಿದ ಮಾಧ್ಯಮ ಮಾನ್ಯತೆ ಪಡೆದ 587 ಪತ್ರಕರ್ತರಿಗೆ ರೂ.11,07,45,250/-ಗಳ ವೆಚ್ಚದಲ್ಲಿ ಲ್ಯಾಪ್ ಟಾಪ್ ಹಾಗೂ ಕ್ಯಾಮೆರ ಒಳಗೊಂಡ ಮೀಡಿಯಾ ಕಿಟ್‌ಗಳನ್ನು ವಿತರಿಸಲಾಗಿದೆ.

**ಸಂಖ್ಯೆ:ಕೆಸಿಐ-ಪಿಐಪಿ/259/2023**

**(ಸಿದ್ದರಾಮಯ್ಯ)**
**ಮುಖ್ಯಮಂತ್ರಿ**